॥ಶ್ರೀಹನುಮದ್ಭೀಮಮಧ್ವಾಂತರ್ಗತನರಹರಿರಾಮಕೃಷ್ಣವೇದವ್ಯಾಸಾತ್ಮಕಲಕ್ಷ್ಮೀಹಯಗ್ರೀವಾಯ ನಮಃ ॥

## 0001a-vishwa

**ಓಂ ವಿಶ್ವಂ ವಿಷ್ಣುರ್ವಷಟ್ಕಾರೋ ಭೂತಭವ್ಯಭವತ್ಪ್ರಭುಃ ।**
**ಭೂತಕೃದ್ ಭೂತಭೃದ್‌ಭಾವೋ ಭೂತಾತ್ಮಾ ಭೂತಭಾವನಃ ॥೧॥**

### ೧) ವಿಶ್ವಂ

೧. ಜ್ಞಾನ, ಆನಂದ, ಸೌಂದರ್ಯ, ಭಕ್ತಿ, ಭಕ್ತವಾತ್ಸಲ್ಯ ಮುಂತಾದ ಸಕಲಗುಣಗಳ ಪ್ರವೇಶಕ್ಕೆ ಆಧಾರನಾಗಿರುವವನು(೧). ಅನಂತಕಲ್ಯಾಣಗುಣಪರಿಪೂರ್ಣನಾಗಿರುವವನು(೨)

‘ಭಗವಂತನ ಮೂಲರೂಪ ಹಾಗೂ ಅವತಾರರೂಪಗಳು ಗುಣಪರಿಪೂರ್ಣಗಳಾಗಿವೆ’ ಎಂಬುದಾಗಿ ಬೃಹದಾರಣ್ಯಕ ಸಂದೇಶಿಸಿದೆ(೩). ‘ಭಗವಂತನು ಗುಣಪರಿಪೂರ್ಣನಾಗಿರುವುದರಿಂದಲೇ ವಿಶ್ವ ಎನಿಸಿರುವನು’ ಎಂದು ಪಾದ್ಮ ನಿರೂಪಿಸಿದೆ(೪). ಅರ್ಜುನನಿಗೆ ಕುರುಕ್ಷೇತ್ರದಲ್ಲಿ ತೋರಿಸಲಾದ ಭಗವಂತನ ಅದ್ಭುತರೂಪವು ವಿಶ್ವರೂಪ’ವೆಂದೇ ಪ್ರಸಿದ್ಧಿ ಪಡೆದಿದೆ(೫).

೨. ಪ್ರೇರಕನಾಗಿ ಎಲ್ಲವನ್ನೂ ಪ್ರವೇಶಿಸಿರುವವನು(೬).

‘ಈ ಎಲ್ಲವನ್ನೂ ಸೃಷ್ಟಿಸಿದ ಭಗವಂತನು ಸೃಷ್ಟಿಯ ಮರುಕ್ಷಣದಲ್ಲಿಯೇ ಎಲ್ಲ ಪದಾರ್ಥಗಳಲ್ಲಿಯೂ ಪ್ರೇರಕನಾಗಿ ಪ್ರವೇಶಿಸಿದನು’ ಎಂದು ತೈತ್ತಿರೀಯೋಪನಿಷತ್ತು ಪ್ರತಿಪಾದಿಸಿದೆ(೭). ಭಗವಂತನು ಸಸ್ಯಗಳನ್ನೂ, ಮನುಷ್ಯರನ್ನೂ, ಪಶುಗಳನ್ನೂ, ಉಳಿದ ಚರಾಚರಭೂತಗಳನ್ನೂ ಪ್ರವೇಶಿಸಿರುವನು’ ಎಂದು ಮಹಾ-ನಾರಾಯಣೋಪನಿಷತ್ತು ‘ವಿಶ್ವ’ ಎಂಬ ಹೆಸರಿನ ಉಲ್ಲೇಖಸಹಿತವಾಗಿಯೇ ತಿಳಿಸಿದೆ(೮).

---

೧ ‘ವಿಶಂತಿ ಸಕಲಾ ಕಲ್ಯಾಣಗುಣಾಃ ಅಸ್ಮಿನ್’ ಇತಿ ವಿಶ್ವಮ್ ।

೨ ವಿಶ್ವಃ ಪೂರ್ಣಸ್ತಥಾ ಸರ್ವಃ ಸಮಸ್ತಶ್ಚಾಭಿಧೀಯತೇ - ಅಭಿಧಾನಮ್ - (ಭಾಗ.ತಾ. ೪/೧೧/೪೭)
‘ಜಗತ್‌ಸಮಸ್ತಂ ವಿಶ್ವಂ ಚ ನಿಖಿಲಂ ಪೂರ್ಣಮುಚ್ಯತೇ’ - ಅಭಿಧಾನಮ್ -(ಭಾಗ.ತಾ. ೪/೧೯/೨೦)

೩ .‘ಪೂರ್ಣಮದಃ ಪೂರ್ಣಮಿದಂ....’ ।
‘ಅವತಾರಾಃ ಮಹಾವಿಷ್ಣೋಃ ಸರ್ವೇ ಪೂರ್ಣಾಃ ಪ್ರಕೀರ್ತಿತಾಃ ।
ಪೂರ್ಣಂ ಚ ತತ್ ಪರಂ ರೂಪಂ ................ ’- (ಬೃ.ಉ.ಭಾ.)

೪ ವಿಶ್ವನಾಮಾ ಸ ಭಗವಾನ್ ಯತಃ ಪೂರ್ಣಗುಣಃ ಪ್ರಭುಃ । (ಪಾದ್ಮ

೫ ‘ತೇಜೋಮಯಂ ವಿಶ್ವಮನಂತಮಾದ್ಯಂ .... ’- (ಗೀತಾ ೧೧/೪೭)

೬ ‘... ವಿಶ್ವೇ ತೇ ಚ ಪ್ರವೇಶನಾತ್’ । - (ಋ.ಭಾ.)
ತೇ ಭಗವದ್ರೂಪವಿಶೇಷಾಃ ಪ್ರೇರಕತಯಾ ಸರ್ವತ್ರ ಪ್ರವೇಶನಾತ್ ವಿಶ್ವೇ ಚ ಪ್ರೋಕ್ತಾಃ ।- (ಋ.ಭಾ.ಟೀಕಾ)

೭ ‘ಇದಂ ಸರ್ವಮಸೃಜತ । ಯದಿದಂ ಕಿಂಚ । ತತ್‌ಸೃಷ್ಟ್ವಾ । ತದೇವಾನುಪ್ರಾವಿಶತ್ ।- (ತೈ.ಉ. ೨/೧೧)

೮ ‘ಯದೋಷಧೀಭಿಃ ಪುರುಷಾನ್ ಪಶೂಂಶ್ಚ ವಿವೇಶ ಭೂತಾನಿ ಚರಾಚರಾಣಿ ..... ವಿಶ್ವಂ ಪುರಾಣಂ ತಮಸಃ ಪರಸ್ತಾತ್ । - ಮ.ನಾ.ಉ.- (ವಿ.ತ.ವಿ)

೩. ಪ್ರಜೆಗಳಿಗೆ ಚಟುವಟಿಕೆಯನ್ನು ನೀಡುವವನು ಅಥವಾ ಜ್ಞಾನವನ್ನು ನೀಡುವವನು[೧].

ಜೀವಾತ್ಮರ ಜಾಗ್ರದಾವಸ್ಥಾಪ್ರೇರಕವಾದ ವೈಶ್ವಾನರ ಎಂದು ಪ್ರಸಿದ್ಧವಾದ ಭಗವದ್ರೂಪವು (ಎಚ್ಚರದ ಸ್ಥಿತಿಯಲ್ಲಿ?) ಬಾಹ್ಯಾರ್ಥಗಳನ್ನು ತಿಳಿಸಿಕೊಡುವುದರಿಂದಲೂ, ಚಟುವಟಿಕೆಗಳನ್ನು ನೀಡುವುದರಿಂದಲೂ 'ವಿಶ್ವ' ಎಂದು ಕರೆಯಲ್ಪಡುವುದು[೨].

೪. ವಿಶ್ವ ಎನಿಸುವ ಜಗತ್ತಿಗೆ ಒಡೆಯನಾಗಿರುವವನು[೩].

ಒಬ್ಬ ವ್ಯಕ್ತಿಗೆ ಅತ್ಯಂತಾಧೀನವಾದ ಪದಾರ್ಥದ ಹೆಸರಿನಿಂದಲೇ ಆ ವ್ಯಕ್ತಿಯನ್ನೂ ಕರೆಯುವ ರೂಢಿಯಿದೆ. ಜಗತ್ತಿನ ಇರುವಿಕೆಯು ಭಗವಂತನ ಅಧೀನವಾಗಿದೆ. ಆದ್ದರಿಂದಲೇ ಜಗದ್ವಾಚಕವಾದ 'ವಿಶ್ವ'ಶಬ್ದದಿಂದ ಭಗವಂತನೂ ವಾಚ್ಯನಾಗಿರುವನು. ವಿಶ್ವವು ಭಗವದಧೀನವಾಗಿರುವುದರಿಂದಲೇ ಭಗವಂತನೂ ವಿಶ್ವ ಎನಿಸಿರುವನೆಂದು ಆಗ್ನೇಯವೂ ಸಮರ್ಥಿಸಿದೆ[೪]. ಕಾಲೀಯನಾಗನ ಪತ್ನಿಯರು ಶ್ರೀಕೃಷ್ಣನನ್ನು 'ವಿಶ್ವ' ಎಂದು ಸ್ತುತಿಸಿರುವುದು ಈ ಅಭಿಪ್ರಾಯದಲ್ಲೇ[೫].

೫. ವಿಶ್ವ ಎನಿಸುವ ಜೀವನಿಗೆ ಒಡೆಯನಾಗಿರುವವನು.

ಶರೀರಗಳಲ್ಲಿ ಪ್ರವೇಶಮಾಡುವ ಪ್ರಯುಕ್ತ ಜೀವನು ವಿಶ್ವ. ಇಂತಹ ಜೀವನು ಭಗವಂತನಿಗೆ ಅತ್ಯಂತ ಅಧೀನನಾಗಿರುವುದರಿಂದ ಅವನಿಗೆ ಒಡೆಯನಾದ ಭಗವಂತನೂ ವಿಶ್ವ ಎನಿಸುವನು[೬].

೬. ಜಗತ್ತಿನಲ್ಲಿ ಪ್ರವೇಶ ಮಾಡಿರುವವನು ಹಾಗೂ ಜ್ಞಾನಸ್ವರೂಪಿಯು[೭].

೭. ಉತ್ತಮಜ್ಞಾನವೇ ಸ್ವರೂಪವಾಗಿರುವವನು ಮತ್ತು ಎಲ್ಲೆಡೆ ಹೋಗುವವನು[೮].

೮. ವಿಶೇಷವಾದ ಸುಖ ಮತ್ತು ಜ್ಞಾನಗಳೇ ಸ್ವರೂಪಗಳಾಗಿ ಉಳ್ಳವನು[೯].

---

೧ '... ವಿಶ್ವೇ ತೇ ಚ .... ವಾಽಥ ವಿಶಾಂ ವಾನಾತ್ ..... ।'- (ಋ.ಭಾ. ೩/೭)
'ವಿಶಾಂ ಪ್ರಜಾನಾಂ ವಾನಾತ್ ಗಮನಾತ್ ಜ್ಞಾನಾದ್ವಾ ।'- (ಋ.ಭಾ.ಟೀ)

೨ 'ಜಾಗರಿತಸ್ಥಾನೋ ಬಹಿಃಪ್ರಜ್ಞಃ ...' (ಮಾಂ.ಉ.೧/೧/೩) ಇತ್ಯತ್ರ ಜಾಗ್ರದವಸ್ಥಾದಿಪ್ರೇರಕತಯಾ ವರ್ಣಿತಃ ವೈಶ್ವಾನರ ಏವ ಉತ್ತರತ್ರ 'ಬಹಿಃಪ್ರಜ್ಞೋ ವಿಭುರ್ವಿಶ್ವೋ ...' (ಮಾಂ.ಉ.೧/೧/೭) ಇತಿ ವಿಶ್ವನಾಮ್ನೈವ ಪರಾಮೃಷ್ಟಃ ।

೩ 'ಉತ್ಪನ್ನಸ್ಯಾಪಿ ಯತ್‌ಸತ್ತಾ ಹರೇಸ್ತತ್ ಸ ಇತೀರ್ಯತೇ ।
ಹರೇರ್ವಿಶ್ವಂ ಭಿನ್ನಮಪಿ ಪರವೋಽಸೌ ಯತೋ ವಿಭುಃ ॥' - ಬ್ರ.ತಂ. -(ಭಾಗ.ತಾ. ೮/೩/೩೧)

೪ 'ವಿಶ್ವಸ್ಯ ತದಧೀನತ್ವಾತ್ ವಿಶ್ವಂ ವಿಷ್ಣುರುದೀರ್ಯತೇ' - ಆಗ್ನೇಯ-(ಭಾಗ.ತಾ. ೧೦/೧೫/೪೧)

೫ 'ವಿಶ್ವಾಯ ತದುಪದ್ರಷ್ಟ್ರೇ...' - (ಭಾಗ ೧೦/೧೫/೪೧)

೬ 'ಶರೀರೇಷು ಪ್ರವಿಷ್ಟತ್ವಾತ್ ವಿಶ್ವೋ ಜೀವ ಉದೀರ್ಯತೇ ।
ಜೀವಸ್ಯ ತದಧೀನತ್ವಾತ್ ವಿಶ್ವೋ ವಿಷ್ಣುರಿತಿ ಸ್ಮೃತಃ ॥' - ಮಾಹಾತ್ಮ್ಯ(ಭಾಗ.ತಾ. ೧೦/೧೫/೪೮)

೭ 'ವಿಷ್ಟಂ ಜ್ಞಾನರೂಪಂ ಚ ವಿಶ್ವಮ್ । 'ವಿಶ ಪ್ರವೇಶನೇ' 'ಟು ಓಶ್ವಿ ಗತಿವೃದ್ಧ್ಯೋಃ' ಇತಿ ಚ । -(ಭಾ.ಪ್ರ.)

೮ 'ತೃತೀಯೋಽತಿಶಯೇ' - ವಾತಿ ಜಾನಾತೀತಿ ವಮ್ । 'ವಾ ಗತಿಗಂಧನಯೋಃ' । ಸ್ವರೂಪಭೂತಜ್ಞಾನಸ್ಯ ಅತಿಶಯೇಽರ್ಥೇ ಇಕಾರಃ, ತೇನ ವಿ ಇತಿ । ಶ್ವಯತಿ ಗಚ್ಛತೀತಿ ಶ್ವಮ್ । ವಿ ಚ ತತ್ ಶ್ವಂ ಚ ವಿಶ್ವಮ್ ।' -(ಭಾ.ಪ್ರ.)

೯ ವಿಶಿಷ್ಟಸುಖರೂಪತ್ವಾತ್ ವಿಶ್ವಮ್ । ಶಕಾರವಕಾರೌ ಆನಂದಜ್ಞಾನವಾಚಿನೌ । - (ವಿ.ರಾ.)

೯. ವಿಶೇಷವಾದ ಸುಖ ಮತ್ತು ಬಲಗಳೇ ಸ್ವರೂಪವಾಗಿ ಉಳ್ಳವನು[೧].

ಭಗವಂತನ ಸುಖಾದಿ(ಗುಣ?)ಗಳು ಅವನ ಸ್ವರೂಪವೇ ಆಗಿವೆ. ಆದುದರಿಂದ ಅವನಲ್ಲಿ ಪೂರ್ಣತ್ವ, ಸ್ವಾತಂತ್ರ್ಯ, ಅನಂತತ್ವ ಮೊದಲಾದ ವಿಶೇಷಗಳು ಇರುವಂತೆ ಅವನ ಗುಣಗಳಲ್ಲಿಯೂ ಆ ವಿಶೇಷಗಳು ಇವೆ.

೧೦. ವಿಶ್ವ ಎನಿಸುವ ವಾಯುದೇವರನ್ನೂ ಪ್ರವರ್ತಿಸುವವನು.

ಎಲ್ಲ ಜೀವಾತ್ಮರಿಗಿಂತ ಪೂರ್ಣನಾಗಿರುವ ಪ್ರಯುಕ್ತ ವಾಯುದೇವರು ವಿಶ್ವ ಎನಿಸಿರುವರು[೨].

೧೧. ಇವರನ್ನೂ ಅಂತರ್ಯಾಮಿಯಾಗಿ ಭಗವಂತನು ಪ್ರೇರಿಸುವನು[೩].

೧೨. ವಿಶೇಷವಾಗಿ ಎಲ್ಲವನ್ನೂ ವ್ಯಾಪಿಸಿರುವವನು[೪].

೧೩. ವಿಶೇಷವಾಗಿ ಎಲ್ಲೆಡೆ ಹೋಗುತ್ತಿರುವವನು[೫].

'ಭಗವಂತನು ಒಂದೆಡೆ ಕುಳಿತಿದ್ದೇ ದೂರಕ್ಕೆ ಹೋಗುವನು. ಮಲಗಿದ್ದೇ ಎಲ್ಲೆಡೆ ಸಾಗುವನು'[೬] ಎಂದು ಕಠೋಪನಿಷತ್ತು ಭಗವಂತನ ಗಮನದಲ್ಲಿಯ ಒಂದು ವೈಶಿಷ್ಟ್ಯವನ್ನು ಹೇಳಿದ್ದರೆ; 'ಪ್ರಾಕೃತ ಕಾಲಿಲ್ಲದೆಯೇ ಓಡುವವನು ಭಗವಂತನು'[೭] ಎಂದು ಶ್ವೇತಾಶ್ವತರೋಪನಿಷತ್ತು ಮತ್ತೊಂದು ವೈಶಿಷ್ಟ್ಯವನ್ನು ಉಲ್ಲೇಖಿಸಿದೆ.

೧೪. ಗರುಡವಾಹನನು - ಗರುಡನ ಮೇಲೆ ಹೋಗುವವನು[೮].

೧೫. ಗರುಡನು ಸಂಚರಿಸುವಂತೆ ಅನುಗ್ರಹಿಸಿರುವವನು[೯].

ಬ್ರಹ್ಮಾಂಡವನ್ನೇ ಹೊತ್ತಿರುವವನು ಪರಮಾತ್ಮ. ಅವನನ್ನು ಹೊತ್ತುಕೊಂಡು ಗಗನದಲ್ಲಿ ಸಂಚರಿಸುವ ಸಾಮರ್ಥ್ಯವನ್ನು ಗರುಡನು ಪಡೆದಿರುವುದು ಆ ಭಗವಂತನ ಅನುಗ್ರಹದಿಂದಲೇ.

---

೧ ವಿಶಿಷ್ಟಸುಖಬಲರೂಪತ್ವಾತ್ ವಿಶ್ವಮ್ । 'ಸುವಃ ಸುಬಲರೂಪತ್ವಾತ್' ಇತಿ ಲಿಂಗಾದ್ ವಶಬ್ದಸ್ಯ ಬಲವಾಚಿತ್ವಾವಗಮಾದಿತಿ ।- (ವಿ.ರಾ.)

೨ ವಿಶ್ವೋ ವಾಯುಃ ಸಮುದ್ದಿಷ್ಟಃ ಪೂರ್ಣತ್ವಾತ್ ಜೀವಸಂಘತಃ । -(ಬೃ.ಉ.ಭಾ. ೬/೪/೧೩)
'... ತತ ಏತೇ ವ್ಯಜಾಯಂತ ವಿಶ್ವೋ ಹಿರಣ್ಯಗರ್ಭೋಽಗ್ನಿಃ ...' - (ಬ್ರ.ಸೂ.ಭಾ. ೧/೨/೨೩)

೩ ವಿಶ್ವಸ್ಯ ವಾಯೋಃ ಅಂತರ್ಯಾಮಿತ್ವಾತ್ ।- (ಭಾ.ಪ್ರ.)

ವಾಯುಮಂತರ್ಯಾಮಿತಯಾ ವರ್ತಯತೀತಿ ವಿಶ್ವಶಬ್ದೋಪಪದಾತ್ 'ವೃತು ವರ್ತನೇ' ಇತ್ಯತೋ ಡಃ । 'ಲೋಪಃ ಸಮಾನಃ' ಇತಿ ವ ಲೋಪಃ ।- (ಸ.ಸಂ.)

೪ ವಿಶೇಷೇಣ ವ್ಯಾಪ್ತತ್ವಾತ್ ವಿಶ್ವಮ್ । 'ಟು ಓಶ್ವಿ ಗತಿವೃದ್ಧ್ಯೋಃ' -(ಭಾ.ಪ್ರ.)

೫ ವಿಶೇಷೇಣ ಶ್ವಯತಿ ಗಚ್ಛತೀತಿ ವಿಶ್ವಮ್ ।

೬ ಆಸೀನೋ ದೂರಂ ವ್ರಜತಿ ಶಯಾನೋ ಯಾತಿ ಸರ್ವತಃ -(ಕ.ಉ.)

೭ ಅಪಾಣಿಪಾದೋ ಜವನೋ ಗೃಹೀತಾ - ಶ್ವೇ.ಉ.-(ಬ್ರ.ಸೂ.ಭಾ.)

೮ ವಿನಾ ಪಕ್ಷಿಣಾ (ಗರುಡೇನ)ಶ್ವಯತಿ ಗಚ್ಛತೀತಿ ವಿಶ್ವಮ್ ।- (ಭಾ.ಪ್ರ.)

೯ ವಿಃ ಪಕ್ಷೀ ಗರುಡಃ ಶ್ವಯತಿ ಗಚ್ಛತಿ ಯಸ್ಮಾತ್ ತದ್ವಿಶ್ವಮ್ ।

೧೬. ಇತರರೆಲ್ಲರಿಗಿಂತ ವಿಶಿಷ್ಟನಾಗಿರುವವನು ಹಾಗೂ ಎಲ್ಲೆಡೆ ಸಂಚರಿಸುವವನು[೧].

೧೭. ಸುಷುಪ್ತಿ ಅವಸ್ಥೆಯಲ್ಲಿ ಜೀವಾತ್ಮರ ಪ್ರವೇಶಕ್ಕೆ ಆಧಾರನಾಗಿರುವವನು[೨].

ಜೀವಾತ್ಮರು ಪ್ರತಿನಿತ್ಯ ತಮ್ಮ ಸುಷುಪ್ತಿ ಅವಸ್ಥೆಯಲ್ಲಿ ಪ್ರಾಜ್ಞನಾಮಕ ಭಗವಂತನನ್ನು ಪ್ರವೇಶಿಸುವರು.

೧೮. ಪ್ರಳಯಕಾಲದಲ್ಲಿ ಜೀವಾತ್ಮರ ಪ್ರವೇಶಕ್ಕೆ ಆಧಾರನಾಗಿರುವವನು[೩].

೧೯. ಮುಕ್ತಾತ್ಮರ ಪ್ರವೇಶಕ್ಕೆ ಆಧಾರನಾಗಿರುವವನು.

ಮುಕ್ತಾತ್ಮರು ತುರೀಯನಾಮಕ ಭಗವಂತನನ್ನು ಸ್ವೇಚ್ಛೆಯಿಂದ ಪ್ರವೇಶಿಸುವರು[೪].

೨೦. ವಿಶೇಷವಾದ ಜ್ಞಾನಸ್ವರೂಪಿ ಅಥವಾ ವಿಶೇಷವಾದ ಜ್ಞಾನವನ್ನು ಹೊಂದಿರುವವನು[೫].

೨೧. ವಿಶೇಷವಾಗಿ ನಿತ್ಯದಲ್ಲೂ ಅಭಿವೃದ್ಧಿಯನ್ನು ಹೊಂದಿರುವವನು[೬].

೨೨. 'ವಿಶ್ವ' ಎನಿಸುವ ಜಗತ್ತಿಗೆ ಕಾರಣನಾಗಿರುವವನು.

ಕಾರ್ಯವಾಚಕಶಬ್ದವು ಕಾರಣವನ್ನು ಹೇಳಬಲ್ಲದು[೭]. ಜಗತ್ತು ಭಗವಂತನಿಂದ ನಿರ್ಮಿತವಾದ ಕಾರ್ಯ. ಆದ್ದರಿಂದ ಜಗದ್ವಾಚಕ ವಿಶ್ವಶಬ್ದದಿಂದ ಭಗವಂತನೂ ವಾಚ್ಯನಾಗಿರುವನು.

೨೩. ವಿಶೇಷವಾದ ಆನಂದದಿಂದ ಗುಣಪೂರ್ಣನಾಗಿರುವವನು[೮].

# 0001b-jijnase

**ಜಿಜ್ಞಾಸೆ (ಗುಣಪರವಾಗಿ ಅರ್ಥಮಾಡಬೇಕು)**

ಪ್ರ: - ವಿಶ್ವಶಬ್ದಕ್ಕೆ ಜಗತ್ತುಎಂಬ ಅರ್ಥವೂ ಇದೆ. ವಿಷ್ಣುವು ಜಗದ್ರೂಪದಿಂದ ವಿಕಾರವನ್ನು ಹೊಂದಿದವನು ಎಂದು ವಿಶ್ವಶಬ್ದಕ್ಕೆ ಏಕೆ ಅರ್ಥವನ್ನು ಹೇಳಬಾರದು?

---

೧ 'ಅಕಯಪ್ರವಿಸಂಭೂಮಸಖಹಾ ವಿಷ್ಣುವಾಚಕಾಃ । ಏಕಾಕ್ಷರಾಃ...' ಇತಿ ಶಬ್ದನಿರ್ಣಯೇ (ಬೃ.ಭಾ.೫/೭/೨) ವಿಶಿಷ್ಟತ್ವಾದೇವ ಭಗವಾನ್ ವಿವರ್ಣವಾಚ್ಯ ಇತಿ ನಿರ್ಣೀತಮ್ । ಶ್ವಯತಿ ಗಚ್ಛತೀತಿ ಶ್ವಮ್ । ವಿಶಿಷ್ಟತ್ವಾತ್ ಗತಿಮತ್ವಾಚ್ಚ ವಿಶ್ವಮ್ ।

೨ 'ಸತಾ ಸೋಮ್ಯ ತದಾ ಸಂಪನ್ನೋ ಭವತಿ' -(ಛಾಂ.ಉ.)

೩ '... ಯತ್ ಪ್ರಯಂತಿ ...'- (ತೈ.ಉ.)

೪ '... ಯತ್ ... ಅಭಿಸಂವಿಶಂತಿ ...'- (ತೈ.ಉ.)

೫ 'ವಿಶೇಷೇಣ ಜ್ಞಾನಸ್ವರೂಪತ್ವಾತ್ ವಿಶ್ವಮ್'-(ಭಾ.ಪ್ರ??.)
ವಿಶಿಷ್ಟಂ ಶ್ವಂ ಜ್ಞಾನಂ ಯಸ್ಮಿನ್ ಇತಿ ವಿಶ್ವಮ್ ।-(ವಾ.ರಾ.)

೬ ವಿಶೇಷೇಣ ನಿತ್ಯವೃದ್ಧತ್ವಾತ್ ವಿಶ್ವಮ್ ।-(ಭಾ.ಪ್ರ.)
ವಿಶಿಷ್ಟಂ ಶ್ವಂ ವೃದ್ಧಿಃ ಯಸ್ಮಿನ್ನಿತಿ ವಿಶ್ವಮ್ ।-(ವಾ.ರಾ.)

೭ ಕಾರ್ಯಕಾರಣಯೋರೇಕಶಬ್ದವ್ಯವಹೃತಿರ್ಭವೇತ್ ।

೮ ವಿಶಿಷ್ಟಾನಂದಪೂರ್ಣತ್ವಾತ್ ವಿಶ್ವಮ್ । 'ವೇತಿ ಪೂರ್ಣತ್ವವಾಚೀ ಸ್ಯಾತ್' ಇತಿ ವಚನಾತ್ ।-(ವಿ.ರಾ.)

ಉ – 'ಯಾನಿ ನಾಮಾನಿ ಗೌಣಾನಿ' ಎಂದು ಹೇಳಿರುವುದರಿಂದ ವಿಶ್ವ ಎಂಬ ನಾಮಕ್ಕೆ(?) ಭಗವಂತನ ಗುಣವನ್ನು ಮಾತ್ರ ಹೇಳಬೇಕು. 'ವಿಷ್ಣುವು ಜಗದ್ರೂಪನು' ಎಂದು ವಿಶ್ವಶಬ್ದಕ್ಕೆ ಅರ್ಥವನ್ನು ಹೇಳಿದರೆ, ವಿಶ್ವನಾಮವು ವಿಷ್ಣುವಿನ ಗುಣಪ್ರತಿಪಾದಕವಾಗುವುದಿಲ್ಲ. ಜಗತ್ತಿನಲ್ಲಿ ಅನಿತ್ಯತ್ವಾದಿ ದೋಷಗಳು ಇರುವುದರಿಂದ ಜಗತ್ಸ್ವರೂಪನಾದ ವಿಷ್ಣುವಿನಲ್ಲಿ ದೋಷಗಳು ಇವೆ ಎಂದರ್ಥವಾಗುತ್ತದೆ. ಆದುದರಿಂದ ಆ ಅರ್ಥವನ್ನು ಸ್ವೀಕರಿಸಬಾರದು.

'ಸರ್ವಂ ಖಲ್ವಿದಂ ಬ್ರಹ್ಮ' 'ವಾಸುದೇವಃ ಸರ್ವಮ್' ಈ ಶ್ರುತಿ ಮತ್ತು ಗೀತೆಯ ವಾಕ್ಯಗಳಲ್ಲಿಯೂ ಸರ್ವಶಬ್ದಕ್ಕೆ ವಿಶ್ವದ ಅರ್ಥವನ್ನು ಇಟ್ಟುಕೊಳ್ಳಬೇಕೇ ಹೊರತು ಈ ಎಲ್ಲವೂ ವಿಷ್ಣುವಿನ ಸ್ವರೂಪ ಎಂದರ್ಥವನ್ನು ಮಾಡಬಾರದು. ''ವಿಶ್ವಃ ಪೂರ್ಣಸ್ತಥಾ ಸರ್ವಃ ಸಮಸ್ತಶ್ಚಾಭಿಧೀಯತೇ' ಎಂಬ ಪ್ರಮಾಣಾನುಸಾರ ವಿಶ್ವ ಮತ್ತು ಸರ್ವಶಬ್ದಗಳು ಪರ್ಯಾಯವಾಗಿವೆ. ಆದ್ದರಿಂದ ಸರ್ವಶಬ್ದವೂ ವಾಸುದೇವನ ಪೂರ್ಣತ್ವವನ್ನು ಹೇಳುತ್ತದೆ.

ಪ್ರ -- ವಿಶ್ವಃ ಎಂದು ಪುಲ್ಲಿಂಗಶಬ್ದವನ್ನು ಇಲ್ಲೇಕೆ ಸ್ವೀಕರಿಸಲಿಲ್ಲ? 'ವಿಶ್ವಃ ಪೂರ್ಣಸ್ತಥಾ ಸರ್ವಃ' ಎಂಬ ಕೋಶದಲ್ಲಿ ಪೂರ್ಣಾರ್ಥಕವಾದ ವಿಶ್ವಶಬ್ದವು ಪುಲ್ಲಿಂಗವಾಗಿಯೇ ಇದೆಯಷ್ಟೇ?

ಉ -- ವಿಶ್ವಾದಿ ಸಹಸ್ರನಾಮಗಳು ಪರಮಾತ್ಮನ ಸಹಸ್ರರೂಪವಾಚಕಗಳು. ರೂಪಶಬ್ದವು ನಪುಂಸಕವಾದುದರಿಂದ ಅದಕ್ಕೆ ವಿಶೇಷಣವಾದ ವಿಶ್ವಶಬ್ದವೂ ನಪುಂಸಕವಾಯಿತು. ವಿಶ್ವಾದಿ ನಾಮಗಳು ಒಂದು ಭಗವದ್ರೂಪವಾಚಕಗಳಲ್ಲ. ಬೇರೆ ಬೇರೆ ರೂಪಗಳ ವಾಚಕಗಳು ಎಂದು ಆರಂಭದ ವಿಶ್ವಶಬ್ದಕ್ಕೆ ರೂಪಶಬ್ದವನ್ನು ವಿಶೇಷ್ಯವಾಗಿ ಸ್ವೀಕರಿಸಿದ್ದರಿಂದ ಗೊತ್ತಾಗುತ್ತದೆಂಬ ಅಭಿಪ್ರಾಯದಿಂದ ಉತ್ತರತ್ರ ಎಲ್ಲ ನಾಮಗಳಿಗೂ ರೂಪಶಬ್ದವನ್ನು ವಿಶೇಷ್ಯವನ್ನಾಗಿ ಇಟ್ಟುಕೊಳ್ಳಲಿಲ್ಲ.

ಪ್ರ -- 'ಸರ್ವಂ ಖಲ್ವಿದಂ ಬ್ರಹ್ಮ' ಎಂಬಲ್ಲಿ ಸರ್ವಶಬ್ದವು ಬ್ರಹ್ಮಶಬ್ದಕ್ಕೆ ವಿಶೇಷಣವಾದುದರಿಂದ ನಪುಂಸಕವಾಗುವುದು ಯುಕ್ತ . ಆದರೆ 'ವಾಸುದೇವಃ ಸರ್ವಂ' ಎಂಬ ಗೀತಾವಾಕ್ಯದಲ್ಲಿ ಸರ್ವಂ ಎಂದು ನಪುಂಸಕವು ಏಕೆ?

ಉ -- 'ವಾಸುದೇವಃ ಸರ್ವಮ್' ಎಂಬಲ್ಲಿ ಸರ್ವಶಬ್ದವು ಜಗದ್ವಾಚಕವೂ ಹೌದು. ಆದುದರಿಂದ ನಪುಂಸಕವಾಯಿತು. ಜಗತ್ತಿಗೂ ವಾಸುದೇವನಿಗೂ ಹೇಳಿದ ಅಭೇದವು ಮುಖ್ಯಾರ್ಥವಲ್ಲ. ಗೌಣವಾದ ಅಭೇದವು ಅಲ್ಲಿ ವಿವಕ್ಷಿತವಾಗಿದೆ.

## 0002A-VISHNU

೨) ವಿಷ್ಣುಃ

೧. ವಿಶಿಷ್ಟವಾದ ಬಲ, ಪ್ರೇರಕತ್ವ ಹಾಗೂ ವ್ಯಾಪ್ತಿ ಇವುಗಳನ್ನು ಸ್ವಾಭಾವಿಕವಾಗಿ ಪಡೆದಿರುವವನು[೧].

---

೧ 'ತಸ್ಯೈ ವಾ ಏತಸ್ಯೈ ಸಂಹಿತಾಯೈ ಣಕಾರೋ ಬಲಂ ಷಕಾರಃ ಪ್ರಾಣ ಆತ್ಮಾ ...' (ಐ.ಉ. ೨/೮/೭-೩)
ವಿಷ್ಣುನಾಮ್ನಿ ಣಶಬ್ದೇನ ವಿಷ್ಣೋರ್ಬಲಮುದೀರ್ಯತೇ ।
ಣ ಇತ್ಯಾಕ್ರಿಯಮಾಣತ್ವಾತ್ ಣಕಾರೋಽಸ್ಯ ಬಲಂ ಮತಮ್ ।
ವಿಷ್ಣುನಾಮ್ನಿ ಷಕಾರೇಣ ರಮಾಬ್ರಹ್ಮೇಶಪೂರ್ವಿಣಃ ।
ಪ್ರಣೇತೃತಾಽಖಿಲಸ್ಯೈವ ವಿಷ್ಣೋರುಕ್ತಾಽಽತ್ಮತಾ ತಥಾ ।
ಆತತತ್ವಂ ಸರ್ವಗುಣೈರ್ದೇಶತಃ ಕಾಲತಸ್ತಥಾ ।
ಆತ್ಮಶಬ್ದೋದಿತಂ ತಚ್ಚ ಷಶಬ್ದೇನಾಭಿಧೀಯತೇ ।
ಷ ಇತ್ಯಾಕ್ರಿಯಮಾಣತ್ವಂ ಪ್ರಣೇತೃತ್ವಂ ಚ ಪೂರ್ಣತಾ ।
ವಿಷ್ಣೋ ಷಕಾರ ಇತ್ಯುಕ್ತಾ ವೀತ್ಯುಕ್ತಸ್ಯ ವಿಶಿಷ್ಟತಾ ।
ಅಂತ್ಯಸ್ಥಿತ ಉಕಾರಸ್ತು ತಾಚ್ಛೀಲ್ಯಂ ಹಿ ಹರೇರ್ವದೇತ್ ।